## ಕಳೆದ ಸಂಚಿಕೆಯಲ್ಲಿ



ಜಾಹ್ನವಿಯ ಮನೆಗೆ ಬಂದ ಮಾಯಣ್ಣನಿಗೆ ಆಕೆಯ ಪ್ರೇಮದ ಅಮಲಿನಿಂದ ಹೊರಬರುವುದು ಸವಾಲೆನ್ನಿಸಿತು. ಅಮ್ಮುವಿನ ಮನೆಗೂ ಡೈರೆಕ್ಟರ್ ದಿನೇಶನ ಮನೆಗೂ ಅಂತರ ಕಡಿಮೆ ಮೂರು ಅಡಿಗಳಷ್ಟಿದ್ದು, ಅಮ್ಮು ಮನೆಗೆ ಹಿಂಭಾಗದಿಂದಲೂ ದಾರಿ ಇರುವ ವಿಷಯವನ್ನು ಜಾಹ್ನವಿ ತಿಳಿಸಿದಳು. ಈ ಒಳದಾರಿಗೂ ಕೊಲೆಗೂ ಸಂಬಂಧ ಇರಬಹುದೆನ್ನುವ ಸಾಧ್ಯತೆ ಮಾಯಣ್ಣನ ತನಿಖೆಗೆ ಅನುಕೂಲಕರವಾದ ಅಂಶವಾಗಿತ್ತು. ಠಾಣೆಗೆ ಬಂದ ದಿನೇಶ್ ಸುಳ್ಳುಗಳನ್ನೇ ಹೇಳತೊಡಗಿದಾಗ ಮಾಯಣ್ಣ ಸಿಟ್ಟಿಗೆದ್ದ... ಅಮೃತಾ ಮತ್ತು ಜಯಂತರ ನಡುವಿನ ಸ್ನೇಹ–ಪ್ರೇಮ ಆರಂಭದಲ್ಲಿ ಮಧುರವಾಗಿಯೇ ಇತ್ತು. ಜಯಂತನ ಅನಾಥಪ್ರಜ್ಞೆಗೆ ಅಮೃತಾ ಸ್ಪಂದಿಸಿದ್ದಳು. ಅನಾಥಭಾವ ಅವಳಲ್ಲೂ ಇತ್ತು. ಒಂದು ದಿನ ಗೆಳತಿಯನ್ನು ಹುಡುಕಿಕೊಂಡು ಚಿತ್ರೀಕರಣ ನಡೆಯುತ್ತಿದ್ದ ಸ್ಟುಡಿಯೊಗೆ ಜಯಂತ್ ಧಾವಿಸಿದ. ಶೂಟಿಂಗ್‌ನ ಒತ್ತಡದಲ್ಲಿದ್ದ ಅಮೃತಾ ಕಾಯಲು ತಿಳಿಸಿದಳು. ಸ್ಟುಡಿಯೊದ ಹೊರಗೆ ಮರವೊಂದರ ಕೆಳಗೆ ಪುಸ್ತಕ ಓದುತ್ತಾ ಕುಳಿತಿದ್ದ ಜಯಂತನಿಗೆ, ಸ್ಟುಡಿಯೊದಿಂದ ಹೊರಬಂದ ಮಹಿಳೆಯೊಬ್ಬಳು ಎದುರಾದಳು. ಬಳಲಿದ್ದ ಅವಳನ್ನು ಜಯಂತ ಮಾತನಾಡಿಸಿದಾಗ, ಆಕೆ ದೃಶ್ಯ ಮಾಧ್ಯಮದಲ್ಲಿನ ಕಾಸ್ಟಿಂಗ್ ಕೌಚ್ ಬಗ್ಗೆ ಆಕ್ರೋಶದಿಂದ ಮಾತನಾಡಿದಳು.

ತಿರುಪಳಿ ಸುತ್ತುಗಳು ಮತ್ತು ಅದರ ಮೇಲೆ ಬಹುಶಃ ಒಣಗಿದ ರಕ್ತವಾಗಿರಬಹುದಾದ ಕಡುಕೆಂಪು ದ್ರವ ಲೇಪವಿತ್ತು. ಇದರ ಬಗ್ಗೆ ಫೋರ್‌ಮನ್ ಮುರುಗನ್ ಅನ್ನು ವಿಚಾರಿಸಲಾಗಿ, ರಕ್ಷಣಾ ಸಾಮಗ್ರಿಯೊಂದರ ಬಿಡಿಭಾಗವಾದ ಅದು, ಜಯಂತನ ಫ್ಯಾಕ್ಟರಿಗೆ ವಹಿಸಿದ ಕೆಲಸವಾಗಿದ್ದು, ಇಂತಹ ಇನ್ನೂರು ತುಂಡುಗಳನ್ನು ತಯಾರಿಸಲು, ರಕ್ಷಣಾ ಇಲಾಖೆಯೇ ಕಚ್ಚಾವಸ್ತುವಾಗಿ, ವಿಶಿಷ್ಟ ಗುಣದ ಉಕ್ಕು ಪೂರೈಕೆ ಮಾಡಿತ್ತೆಂದು ತಿಳಿದುಬಂದಿತ್ತು. ಕೊಲೆಗೆ ಬಳಸಿದ್ದು ಎಂದು ತಿಳಿಯಲಾದ ಈ ರಾಡು ಇಡೀ ತನಿಖೆಯಲ್ಲಿ ಅತ್ಯಂತ ಪ್ರಮುಖ ಸಾಕ್ಷಿಯಾಗಿದ್ದು, ಇದರ ಸಂಗ್ರಹಣ ವಿಧಿಯಲ್ಲಿ ಯಾವ ಲೋಪವೂ ಆಗದಂತೆ, ಅದು ಇದ್ದಲ್ಲಿಂದ ತೆಗೆದು, ಅಪರಾಧ ವಿಧಿವಿಧಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು.

ವಿನಯ್, ಕುಮಾರ್, ಭುಜಂಗ ಮತ್ತು ಇತರೆ ಪೇದೆಗಳು ತಮ್ಮ ಬೆಳಗಿನ ಕಾಫಿ ಲೋಟ ಹಿಡಿದು ಮಾಯಣ್ಣನ ರೂಮಿಗೆ ಬಂದಿದ್ದರು.

'ಸಾರ್, ಸ್ಟೇಷನ್ ಡೈರಿಯಲ್ಲಿ ಜಯಂತ್ ಎಂಬ ಶಂಕಿತನನ್ನು ವಿಚಾರಣೆಗಾಗಿ ವಶಕ್ಕೆ ತೆಗೆದುಕೊಂಡಿದ್ದೇವೆ ಅಂತ ಎಂಟರ್ ಮಾಡಿದ್ದೀವಿ... ಈಗ ಬಂಧಿಸಿದ್ದೇವೆ ಅಂತ ಎಂಟರ್ ಮಾಡ್ಲಾ ಸಾರ್?'

'ಬೇಡ ಕುಮಾರ್, ಜಯಂತ್ ಹೋಗಲಿ... ಹಾಗೆ ಆ ಡೈರೆಕ್ಟರ್ ದಿನೇಶ್ ಮತ್ತು ರವಿ ಕೂಡ ಹೋಗಲಿ. ಆದರೆ ಆ ಮೂರೂ ಜನ ನಮಗೆ ಯಾವಾಗ ಬೇಕಾದರೂ, ಯಾವಾಗ ಕರೆದರೂ ಬರುವಂತಿರಬೇಕು... ಆ ರೀತಿ ತಾಕೀತು ಮಾಡಿ ಕಳುಹಿಸಿ'.

ಮಾಯಣ್ಣನ ಈ ವಿಚಿತ್ರ ನಿರ್ಧಾರ ಎಲ್ಲರಿಗೂ ಬಹಳ ಆಶ್ಚರ್ಯ ತಂದಿತ್ತು.

'ಯೆಸ್ ಸಾರ್...'

'ಸಾರ್, ಈ ತನಿಖೆ ಹೆಚ್ಚು ಕಡಿಮೆ ಮುಗಿದ ಹಾಗಲ್ವ ಸಾರ್...'

'ವಿನಯ್, ನಾನು ಕೊಲೆಯಾದ ಮಾರನೇ ದಿನ ಹೇಳಿದ್ದು ನೆನಪಿರಲಿ... ಕೊಲೆ ಆಯುಧದ ಎರಡೂ ತುದಿಯೂ ಸಾಕ್ಷಿ ಹೇಳಬೇಕು. ಒಂದು ತುದಿ ಕೊಲೆಗಾರ ಅದನ್ನು ಹಿಡಿದಿದ್ದ ಎಂದಾದರೆ, ಇನ್ನೊಂದು ತುದಿ ಕೊಲೆಯಾದ ವ್ಯಕ್ತಿಯನ್ನು ಕೊಂದಿತ್ತು ಎಂದು. ಅದು ಲ್ಯಾಬ್ ರಿಪೋರ್ಟ್ ಬಂದ ಮೇಲಷ್ಟೆ ತಿಳಿಯುವುದು?'

'ಸಾರ್, ಐದು ದಿನ ಟೈಮ್ ಇತ್ತು, ಆದ್ರೂ ಆ ಮರ್ಡರ್ ವೆಪನ್ ಯಾಕೆ ಎಲ್ಲಾದ್ರು ಎಸೀದೆ ಕಾರಲ್ಲೇ ಇಟ್ಕೊಂಡಿದ್ದಾ ಸಾರ್...?'

'ನನ್ನನ್ನೂ ಅದೇ ಪ್ರಶ್ನೆ ಕಾಡುತ್ತಿದೆ ಭುಜಂಗ... ಬುದ್ಧಿವಂತನಾದ ಜಯಂತ್ ಅದನ್ನು ಎಲ್ಲಿ ಬೇಕಾದರೂ ಬಿಸಾಡಬಹುದಿತ್ತು, ಅದ್ಯಾಕೆ ತನ್ನ ಕಾರಲ್ಲೇ ಇಟ್ಟುಕೊಂಡಿದ್ದ ಅಂತ. ಅಥವಾ ಅದಕ್ಕೆ ಎರಡು ಕಾರಣ ಇರಬಹುದು. ಮೊದಲನೆಯದು, ಜಯಂತನ ಫ್ಯಾಕ್ಟರಿಯ ಈ ಮೆಷಿನ್ ಜಾಬ್ ಬಂದು ಆರ್ಮಿ ವರ್ಕು. ಅವರು ಸಪ್ಲೈ ಮಾಡಿರೋದು ಸ್ಪೆಷಲ್ ಸ್ಟೀಲ್, ಡಿಫೆನ್ಸ್ ಮೆಟೀರಿಯಲ್. ಅವರು ಆಗಲೇ ಕೆದಕಿದ್ದಾರೆ, ಸಪ್ಲೈ ಮಾಡಬೇಕಿದ್ದ ಇನ್ನೂರು ಪೀಸಲ್ಲಿ ಒಂದು ಪೀಸ್ ಮಿಸ್ಸಿಂಗು, ಅದು ಎಲ್ಲಿ ಅಂತ. ಅದಿಲ್ಲಾ ಅಂದರೆ, ಇವರು ಮಾಡಿರೊ ಕೆಲಸಕ್ಕೆ ಪೇಮೆಂಟ್ ಆಗಲ್ಲ, ಇವರ ಭದ್ರತಾ ಠೇವಣಿ ಹೋಗುತ್ತೆ, ಮುಂದಕ್ಕೆ ಇವರಿಗೆ ಡಿಫೆನ್ಸ್ ಕೆಲಸಗಳು ಸಿಗೋದಿಲ್ಲ, ಅಲ್ಲದೆ ಈ ಮಿಸ್ಸಿಂಗ್ ಪೀಸ್ ತಂದುಕೊಡಲಿಲ್ಲ ಅಂದರೆ ಪೊಲೀಸ್ ಕೇಸ್ ಆಗಿ ಜೈಲಿಗೂ ಹೋಗಬೇಕಾಗಬಹುದು. ಅವರು ಇದರ ಮೆಟಲ್ ಸ್ಕ್ರಾಪು ಬಿಡಲ್ಲ, ಬಳ್ಕೊಂಡೋಗ್ತಾರೆ... ನಾನು ಜಯಂತನ ಕಂಪ್ಯೂಟರ್ ಚೆಕ್ ಮಾಡಿದ್ದೀನಿ... ಅವರ ವರ್ಕ್ ಆರ್ಡರ್‌ನಲ್ಲಿ ಇದೆಲ್ಲಾ ಷರತ್ತುಗಳೂ ಇವೆ. ಎರಡನೇ ಕಾರಣ, ಬೇರೆ ಇನ್ಯಾರೋ ಅದನ್ನ ಜಯಂತನ ಕಾರಲ್ಲಿ ತಂದು ಇಟ್ಟಿರಬಹುದಲ್ಲ? ಈಗ ಸದ್ಯಕ್ಕೆ ಜಯಂತನ್ನ ಕಳಿಸಿ'.

ಜಯಂತ್ ಎದುರು ಬಂದು ಕೈಕಟ್ಟಿ ನಿಂತಿದ್ದ. ಅವನ ಮುಖದಲ್ಲಿ ಪಾಪಪ್ರಜ್ಞೆ ಅಥವಾ ಪಶ್ಚಾತ್ತಾಪದ ಭಾವ ಇದ್ದಂತಿರಲಿಲ್ಲ.

'ಗೇಮ್ ಓವರ್ ಜಯಂತ್... ಈಗಲಾದರು ಹೇಳು ಎಲ್ಲವನ್ನೂ ವಿವರವಾಗಿ...'

'ನನಗೆ ನಿಜವಾಗಲೂ ಗೊತ್ತಿಲ್ಲ, ಆ ರಾಡ್ ಹೇಗೆ ನನ್ನ ಕಾರಿನಲ್ಲಿ ಬಂತು ಅಂತ... ಸಮ್‌ಒನ್ ಹ್ಯಾಸ್ ಪ್ಲಾಂಟೆಡ್ ಇಟ್ ಟು ಫಿಕ್ಸ್ ಮಿ...'

'ನೀನು ಒಪ್ಪಿಕೊಳ್ಳಿಯೊ ಬಿಡ್ತಿಯೊ, ಏನೂ ವ್ಯತ್ಯಾಸ ಆಗಲ್ಲ. ಈಗಾಗಲೇ ನಮ್ಮ ಹತ್ತಿರ ಕೋರ್ಟಿಗೆ ಬೇಕಾಗೂ ಅಷ್ಟು, ಕೋರ್ಟು ಒಪ್ಪೊ ಅಷ್ಟು ಸಾಕ್ಷಿ ಪುರಾವೆ ಇದೆ. ಎಲ್ಲಾ ವಿಷಯ, ವಿವರವಾಗಿ ಹೇಳುದ್ರೆ ಸರಿ. ಇಲ್ಲಾ ಅಂದ್ರೆ ನಮಗೆ ಹೇಗೆ ನಿನ್ನ ಹ್ಯಾಂಡಲ್ ಮಾಡಬೇಕು ಅಂತ ಗೊತ್ತಿದೆ'.

'ಸರ್, ನನ್ನನ್ನು ಮನುಷ್ಯತ್ವ, ಆತ್ಮಸಾಕ್ಷಿಗಳಿಲ್ಲದ ಗೊಡ್ಡು ಮನುಷ್ಯ ಅಂತ ತಿಳಿಬೇಡಿ. ನನಗೂ, ಸರಿ–ತಪ್ಪುಗಳನ್ನ ತೂಗಿ ನೋಡುವ ವಿವೇಚನೆ ಇದೆ. ಒಳಗೇ ದುಃಖ ಮತ್ತು ಅಪರಾಧಿ ಪ್ರಜ್ಞೆಗಳಿಂದ ಕುಗ್ಗಿ ಹೋಗಿದ್ದೇನೆ. ನಾನು ಅದನ್ನು ಯಾರಿಗೂ ಸಾಬೀತು ಮಾಡಬೇಕಿಲ್ಲ. ನೀವು ನನಗೆ ಚಿತ್ರಹಿಂಸೆ ಕೊಟ್ಟರೂ, ನನಗೆ ಹೇಳುವುದಕ್ಕೆ ಬೇರೆ ಏನೂ ಇಲ್ಲ'.

'ಅಪರಾಧಿ ಪ್ರಜ್ಞೆ ಅಂದರೆ?'

'...'

'ಓಕೆ, ಆಮೇಲೆ ನಿನ್ನತ್ರ ನಮ್ಮ ಪೀಸಿಗಳು ಮಾತಾಡ್ತಾರೆ ಬಿಡು'.

ಭುಜಂಗ ಇತ್ತ ಜಯಂತನನ್ನು ಕರೆದುಕೊಂಡು ಹೋದ ಮೇಲೆ ಅತ್ತ ವಿನಯ್ ಬಂದ.

'ಸಾರ್, ನೀವು ಹೇಳಿದ ಹಾಗೆ ಜಾಹ್ನವಿಯವರ ಬ್ಯಾಂಕ್ ಟ್ರಾನ್ಸಾಕ್ಷನ್ಸ್ ಚೆಕ್ ಮಾಡುದ್ವಿ. ಈ ಒಂದು ತಿಂಗಳಲ್ಲಿ ದುಬೈನಲ್ಲಿರುವ ಅವರ ಕಸಿನ್, ರಿಟೈರ್ಡ್ ರೌಡಿ ವೇಣು ಅಕೌಂಟಿಗೆ ಏಳು ಲಕ್ಷ ಸಂದಾಯವಾಗಿದೆ. ಅದರ ಒಂದೇ ವಾರದಲ್ಲಿ, ವೇಣು ಅಕೌಂಟಿಂದ ನಾಲ್ಕು ಲಕ್ಷ, ಪಕ್ಕದ ಜ್ಯೂರಿಸ್‌ಡಿಕ್ಷನ್ ರೌಡಿಶೀಟರ್ ಲೋಗನಾಥನ್ ತಮ್ಮನ ಅಕೌಂಟಿಗೆ ಬಂದಿದೆ'.

'ಯಾವ ಲೋಗನಾಥನ್?'

'ಅದೇ ಸಾರ್, ಕೊಲೆಯಾದ, ಮೆಡಿಕಲ್ ಸ್ಟೋರ್ಸ್ ವಿಜಯ್ ಕುಮಾರ್ ಕೇಸಿನ ಆರೋಪಿ. ಹಳೇ ಸುಪಾರಿ ಮರ್ಡರ್ ಕೇಸ್. ಈಗ ಬೇಲ್ ಮೇಲೆ ಹೊರಗಿದ್ದಾನೆ'.

'ಆಮೇಲೆ ಏನಾಯ್ತು?'

'ಮೊನ್ನೆ ರಾತ್ರಿ ಫುಲ್ ಟೈಟ್ ಆಗಿ ಬಾರಿಂದ ಮನೆಗೆ ಹೋಗ್ಬೇಕಾದರೆ ಯಾವೊನೊ ಕಾರ್ ಹತ್ಸಿ, ಲೋಗನಾಥನ್ ಹೋಗ್ಬಿಟ್ಟ ಸಾರ್'.

'ವಿನಯ್, ಈ ಪಾರ್ಟ್ ನೀವೇ ತನಿಖೆ ಮಾಡಿ... ಜಾಹ್ನವಿಯವರಿಂದ ಅಷ್ಟೊಂದು ಹಣ ಇಲ್ಲಿಂದ ದುಬೈಗೆ ಹೋಗಿ ಸುತ್ತು ಹಾಕಿಕೊಂಡು ಮತ್ತೆ ಇಲ್ಲಿಗೇ ಏಕೆ ಬಂತು, ಕೊನೆಗೆ ಯಾರ ಕೈ ಸೇರ್ತು, ಯಾವ ಉದ್ದೇಶಕ್ಕೆ ಬಂತು? ವಿನಯ್ ಮತ್ತೆ ಆ ಇಬ್ಬರು ಹೊಸ ಲೇಡಿ ಪೀಸಿ ಬಂದಿದ್ದಾರಲ್ಲ